ಮಡಿಕಲ್ ವರ್ಕರ್ಸ್ 522, ಸ್ಟಾಪ್ ನರ್ಸ್ 223, ಕಿರಿಯ ಲ್ಯಾಬ್ ಟೆಕ್ನಿಷಿಯನ್ಸ್ 620 ಹಿರಿಯ ಲ್ಯಾಬ್ ಟೆಕ್ನಿಷಿಯನ್ಸ್ 44, ಎಕ್ಸರೆ ಟೆಕ್ನಿಷಿಯನ್ಸ್ 11, ರೇಡಿಯೋ ಗ್ರಾಫರ್ಸ್ 10, ರೆಫ್ರಿಜರೇಟರ್ ಮೆಕ್ಯಾನಿಕ್ 168, 'ಡಿ' ದರ್ಜೆ ಸಿಬ್ಬಂದಿ 2,568 ಒಟ್ಟು 3,823 ಹುದ್ದೆಗಳು, ಅಗತ್ಯವಾಗಿ ನಮ್ಮ ಆರೋಗ್ಯ ಇಲಾಖೆಗೆ ಬೇಕಾಗಿರುವುದರಿಂದ (ಡಿ) ದರ್ಜೆ ಹುದ್ದೆಗಳ ಪೈಕಿ 1,000 ದಿನಗೂಲಿ ಅಭ್ಯರ್ಥಿಗಳನ್ನು ಕೃಷಿ ಮತ್ತು ರೇಷ್ಮೆ ಇಲಾಖೆಯಿಂದ ಈಗಾಗಲೇ ನೇಮಕಾತಿ ಮಾಡಿ ತೆಗೆದುಕೊಳ್ಳುತ್ತಿದ್ದೇವೆ. 2,823 ಅಗತ್ಯವಿರತಕ್ಕಂಥ ಸಿಬ್ಬಂದಿಗಳ ನೇಮಕಕ್ಕೆ ಈ ವರ್ಷದ ಅಂತ್ಯದೊಳಗೆ ಸರ್ಕಾರ ಕ್ರಮ ತೆಗೆದುಕೊಳ್ಳುತ್ತದೆಂದು ಮಾನ್ಯ ಎಲ್ಲ ಸದಸ್ಯರುಗಳಿಗೆ ತಿಳಿಸುತ್ತೇನೆ.

ಅಧ್ಯಕ್ಷರು : 1067ನೇ ಪ್ರಶ್ನೆಗೆ ಉತ್ತರಿಸಲು ಸಮಯ ಕೇಳಿದ್ದಾರೆ.

ಶ್ರೀ ಬಿ. ಶಿವರಾಮು : ಗೊತ್ತಾಯಿತು, ನಾನು ಆವಾಗ ಕೈ ಎತ್ತಿದ್ದೂ ಇದೇ ಉದ್ದೇಶ. ಈಗಾಗಲೇ ಮಂತ್ರಿಗಳು ಹೇಳಿದರು ಐ.ಪಿ.ಪಿ 9ರಲ್ಲಿ ಮಂಜೂರಾಗಿದೆ ವಸತಿ ಗೃಹಗಳನ್ನು ಕಟ್ಟುತ್ತೀರಿ ಇದನ್ನು ಕಟ್ಟುತ್ತೇವೆ ಅಂತ. ಅದು ಏನಾಯಿತು ಅಂತ ಮಂತ್ರಿಗಳಿಗೆ ಗೊತ್ತಿರಬೇಕಲ್ಲ ವಿಚಾರ ಅದು. ಜೊತೆಗೆ ನಾನು ಯಾವ ಉದ್ದೇಶದಿಂದ ಈ ಪ್ರಶ್ನೆ ಹಾಕಿದ್ದೀನಿ ಅಂತ ಯೋಚನೆ ಮಾಡಬೇಕು. ಅದಕ್ಕೆ ಅಂದಾಜನ್ನು ಕೇಳಿದ್ದೀನಿ. ಜಿಲ್ಲಾ ಪರಿಷತ್‌ಗೆ ಇನ್ನೂ ಒದಗಿಸುವಂಥದ್ದನ್ನು ಮಾಡಿಲ್ಲ. ಅದಕ್ಕೆ ಅವರು ಮಾಹಿತಿಯನ್ನು ಕೊಟ್ಟಿಲ್ಲ. ನಿಮ್ಮ ಮೂಲಕ ಪ್ರಶ್ನೆಗಳನ್ನು ಏಕೆ ಕೇಳುತ್ತೀರಿ ನಾವು? ಅದನ್ನು ತಪ್ಪಿಸತಕ್ಕಂತಹ ಕೆಲಸ ಮಾಡಿದರೆ, ನಿಮಗೆ ಗೊತ್ತೇ ಇದೆ, ಈಗ ಮಂತ್ರಿಗಳು ಸದನಕ್ಕೆ ಬರುವುದಿಲ್ಲ. ಬಹಳಷ್ಟು ಮಂತ್ರಿಗಳು ಬರುವುದಿಲ್ಲ. ಪ್ರಶ್ನೆಗಳನ್ನು ಕೇಳಿದರೆ ಉತ್ತರವನ್ನು ಕೊಡುವುದಿಲ್ಲ. ಈ ರೀತಿಯಾದರೆ ಹೇಗೆ ಕೆಲಸಗಳು ಆಗುತ್ತದೆ?

ಅಧ್ಯಕ್ಷರು : ನಾನು ಉತ್ತರ ತರಿಸಿಕೊಡುತ್ತೇನೆ, ದಯಮಾಡಿ ನನ್ನಲ್ಲಿ ವಿಶ್ವಾಸ ಇಡಿ.

ವಿರಾಜಪೇಟೆಯಲ್ಲಿ 10 ಹಾಸಿಗೆಗಳ ಆಸ್ಪತ್ರೆ ನಿರ್ಮಾಣ ಕುರಿತು

924 - ಶ್ರೀ ಹೆಚ್.ಡಿ. ಬಸವರಾಜು (ವಿರಾಜಪೇಟೆ) : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ವಿರಾಜಪೇಟೆ ತಾಲ್ಲೂಕಿನಲ್ಲಿನ 10 ಹಾಸಿಗೆಗಳ ಆಸ್ಪತ್ರೆಯನ್ನು ಎಷ್ಟು ಹಣ ವೆಚ್ಚ ಮಾಡಿ ನಿರ್ಮಾಣ ಮಾಡಿದೆ ಹಾಗೂ ಯಾವ ವರ್ಷದಲ್ಲಿ.

ಆ) ಈ ಆಸ್ಪತ್ರೆಯಲ್ಲಿ ಎಷ್ಟು ವೈದ್ಯಾಧಿಕಾರಿಗಳನ್ನು ನೇಮಕ ಮಾಡಿಕೊಳ್ಳಲಾಗಿದೆ ಹಾಗೂ ಎಲ್ಲಾ ಹುದ್ದೆಗಳು ಭರ್ತಿಯಾಗಿದೆಯೇ? ಹಾಗಿಲ್ಲದಿದ್ದಲ್ಲಿ ಕಾರಣವೇನು?

ಶ್ರೀ ಹೆಚ್.ಸಿ. ಮಹದೇವಪ್ಪ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):

ಅ) ವೀರಾಜಪೇಟೆಯ ಸಾರ್ವಜನಿಕ ಆಸ್ಪತ್ರೆಯು 240 ಹಾಸಿಗೆಯ ಆಸ್ಪತ್ರೆಯಾಗಿದ್ದು 1994-95ನೇ ಸಾಲಿನಲ್ಲಿ 10 ಹಾಸಿಗೆಗಳ ಮಕ್ಕಳ ವಾರ್ಡಿಗೆ 20 ಲಕ್ಷ ರೂಪಾಯಿ ಅಂದಾಜಿಗೆ ಆಡಳಿತಾತ್ಮಕ ಅನುಮೋದನೆ ನೀಡಲಾಗಿದೆ.

ಆ) ಈ ಆಸ್ಪತ್ರೆಗೆ 10 ವೈದ್ಯರ ಹುದ್ದೆ ಮಂಜೂರಾಗಿದ್ದು 6 ಹುದ್ದೆಗಳನ್ನು ಭರ್ತಿ ಮಾಡಲಾಗಿದೆ. 4 ಹುದ್ದೆಗಳು ಖಾಲಿ ಇದೆ

ಶ್ರೀ ಹೆಚ್.ಡಿ. ಬಸವರಾಜು : ಉತ್ತರದಲ್ಲಿ 10 ಹಾಸಿಗೆಗಳ ವಾರ್ಡನ್ನು 20 ಲಕ್ಷ ರೂಪಾಯಿಗಳ ಅಂದಾಜು ವೆಚ್ಚದಲ್ಲಿ 1994-95ರಲ್ಲಿ ಅನುಮೋದನೆಯನ್ನು

ನೀಡಲಾಗಿದೆ, ಎಂದು ಹೇಳಿದ್ದಾರೆ. ಇನ್ನು ಎಷ್ಟು ವರ್ಷ ಮಕ್ಕಳಿಗೆ ಒಂದು ವಾರ್ಡ ಆಗಲಿಕ್ಕೇಂತ ತಿಳಿಯಲಿಕ್ಕೆ ಇಚ್ಛಿಪಡುತ್ತೇನೆ. ಎರಡನೆಯದಾಗಿ ಈ ಆಸ್ಪತ್ರೆಯಲ್ಲಿ ನಾಲ್ಕು ಹುದ್ದೆಗಳು ಖಾಲಿ ಇವೆ ಅಂತ ಹೇಳಿದ್ದಾರೆ. ಈ 4 ಹುದ್ದೆಗಳು ಎಷ್ಟು ವರ್ಷದಿಂದ ಖಾಲಿ ಇವೆ ಅಂತ ತಮಗೆ ಗೊತ್ತಿದೆ. ಅದರ ಬಗ್ಗೆ ನಾನು ಹೇಳುವುದಿಲ್ಲ. ಆದಷ್ಟು ಬೇಗ ಅಂದರೆ ಎಷ್ಟು ದಿನಗಳಲ್ಲಿ ತಾವು ಇದನ್ನು ಭರ್ತಿ ಮಾಡುತ್ತೀರ ಎನ್ನುವುದು ಮತ್ತು ಕಾನ್ನೂರು ಆಸ್ಪತ್ರೆಯಲ್ಲಿ ಒಂದು 10 ಹಾಸಿಗೆಗಳ ಕಟ್ಟಡ ಕಟ್ಟಿದ್ದಾರೆ, ಅಲ್ಲಿ ಯಾವುದೇ ಒಂದು ವೈದ್ಯಾಧಿಕಾರಿಗಳನ್ನು ನೇಮಕ ಮಾಡಿಲ್ಲ. ಮತ್ತೆ ಔಷಧಿ ಸರಬರಾಜು ವೀರಾಜಪೇಟೆ ತಾಲ್ಲೂಕಿನಲ್ಲಿ ಸಮರ್ಪಕವಾಗಿಲ್ಲ ಇಷ್ಟಕ್ಕೂ ಆರೋಗ್ಯ ಮಂತ್ರಿಗಳಿಂದ ಉತ್ತರವನ್ನು ನಿರೀಕ್ಷಿಸುತ್ತೇನೆ.

ಶ್ರೀ ಹೆಚ್.ಸಿ. ಮಹದೇವಪ್ಪ : ಮಾನ್ಯ ಅಧ್ಯಕ್ಷರೆ, ವೀರಾಜಪೇಟೆ ಜನರಲ್ ಆಸ್ಪತ್ರೆ 240 ಹಾಸಿಗೆ ಸಾಮರ್ಥ್ಯವನ್ನು ಹೊಂದಿರುತ್ತದೆ. ಸುಮಾರು 1918ರಲ್ಲಿ ನಿರ್ಮಾಣ ಮಾಡಿದ್ದು ಹಾಲಿ 1994-95ನೇ ಸಾಲಿನ ಆಯವ್ಯಯದಲ್ಲಿ ಈ ಆಸ್ಪತ್ರೆಯನ್ನು ವಿಸ್ತರಿಸುವ ದಿಸೆಯಲ್ಲಿ ಮೊದಲ ಹಂತದ ಕಾಮಗಾರಿಗಾಗಿ 20 ಲಕ್ಷ ರೂ. ವೆಚ್ಚದಲ್ಲಿ 10 ಹಾಸಿಗೆಯ ಮಕ್ಕಳ ವಾರ್ಡ ನಿರ್ಮಾಣ ಹಾಗೂ ಬ್ಲಡ್ ಬ್ಯಾಂಕ್ ನಿರ್ಮಾಣಕ್ಕಾಗಿ ಎಂದು ಸರ್ಕಾರದ ಆದೇಶ ಸಂಖ್ಯೆ : ಆಕ್ಕಕ; 9 ; ಆಯೊಕ : 94, ಬೆಂಗಳೂರು, ದಿನಾಂಕ 4-3-94ರಲ್ಲಿ ಸರ್ಕಾರ ಆಡಳಿತಾತ್ಮಕ ಅನುಮೋದನೆ ನೀಡಿರುತ್ತದೆ. ಈ ಬಗ್ಗೆ ಮುಖ್ಯ ಇಂಜಿನಿಯರ್‌ರವರು ಸಂಪರ್ಕ ಮತ್ತು ಕಟ್ಟಡಗಳು (ದಕ್ಷಿಣ) ಇವರ ಮಾರ್ಚ್ 10ರ ತ್ರೈಮಾಸಿಕ ಪ್ರಗತಿ ವರದಿಯಲ್ಲಿ ಡಿಸೆಂಬರ್ ಅಂತ್ಯದವರೆಗೆ ಈ ಕಾಮಗಾರಿ ಟೆಂಡರ್ ಪರಿಶೀಲನೆಯಲ್ಲಿದೆ. ಎಂದು ತಿಳಿಸಿರುವಂತೆ ಈ 10 ಹಾಸಿಗೆಗಳ ವಾರ್ಡ ಕಾಮಗಾರಿಯ ಇನ್ನೂ ಪ್ರಾರಂಬವಾಗಿರುವುದಿಲ್ಲ. ಹಾಗೂ 10 ಲಕ್ಷ ರೂಪಾಯಿಗಳ ಅಂದಾಜು ವೆಚ್ಚದಲ್ಲಿ ಈ ಆಸ್ಪತ್ರೆಯ ಓ.ಪಿ.ಡಿ. ಹಾಗೂ ಮೆಟರ್ನಿಟಿ L ಬ್ಲಾಕ್ ನಿರ್ಮಾಣ ಎಂಬ ಸಂಚಿಕೆಯಲ್ಲಿ ಕಾಮಗಾರಿಗಳು ನಿರ್ದೇಶಕರು ಮಂಜೂರಾತಿ ನೀಡಿದ್ದು, ಈ ಕಾಮಗಾರಿಗೂ ನಾಲ್ಕನೇ ಬಾರಿಗೆ ಟೆಂಡರ್ ಕರೆಯಲಾಗಿದೆ ಎಂದು ಪ್ರಗತಿ ವರದಿಯಲ್ಲಿ ತಿಳಿಸಿರುತ್ತಾರೆ. ಈ ಕಾಮಗಾರಿ ಇನ್ನೂ ಪ್ರಾರಂಭವಾಗಿರುವುದಿಲ್ಲ. 1994-95 ಸಾಲಿಗೆ ಮೂರು ಲಕ್ಷ ರೂಗಳ ಅನುದಾನವನ್ನು ಈ ಕಾಮಗಾರಿಗೆ ಒದಗಿಸಲಾಗಿದೆ. ಕೊಡಗು ಜಿಲ್ಲೆಯ, ವೀರಾಜಪೇಟೆ ತಾಲ್ಲೂಕಿಗೆ ಒಟ್ಟು 10 ವೈದ್ಯರ ಹುದ್ದೆ ಮಂಜೂರಾಗಿದ್ದು ಈ ಪೈಕಿ 6 ಸಹಾಯಕ ಶಸ್ತ್ರ ಚಿಕಿತ್ಸಕ ಹುದ್ದೆಗಳಾಗಿದ್ದು, ಈ ಎಲ್ಲ 6 ಸಹಾಯಕ ಶಸ್ತ್ರ ಚಿಕಿತ್ಸಕ ಹುದ್ದೆಗಳಾಗಿದ್ದು, ಈ ಎಲ್ಲ ಸಹಾಯಕ ಶಸ್ತ್ರ ಚಿಕಿತ್ಸಕ ಹುದ್ದೆಗಳನ್ನು ಭರ್ತಿ ಮಾಡಲಾಗಿದೆ. ಹಾಗೂ ಉಳಿದ ಉಪ ಶಸ್ತ್ರ ಚಿಕಿತ್ಸಕರ ಹುದ್ದೆಗಳು ಮತ್ತು ಸಿವಿಲ್ ಸರ್ಜನ್ ಹುದ್ದೆ ಖಾಲಿ ಇರುತ್ತದೆ. ಈ ಖಾಲಿ ಹುದ್ದೆಗಳನ್ನು ಏಪ್ರಿಲ್-ಮೇ 1995ರಲ್ಲಿ ಭರ್ತಿ ನೀಡುವುದರ ಮೂಲಕ, ಭರ್ತಿ ಮಾಡಲು ಕ್ರಮ ಕೈಗೊಳ್ಳಲಾಗುವುದೆಂದು ತಿಳಿಸಬಯಸುತ್ತೇನೆ.

ಶ್ರೀ ಹೆಚ್.ಡಿ. ಬಸವರಾಜು : ಕಾನೂರ್ ಆಸ್ಪತ್ರೆ ಬಗ್ಗೆ ಯಾವುದೇ ಒಂದು ವಿವರಣೆ ನೀಡಿಲ್ಲ. ಕಾನೂರ್ ಆಸ್ಪತ್ರೆಯಲ್ಲಿ 10 ಹಾಸಿಗೆಗಳ ಕಟ್ಟಡ ಕಟ್ಟಿದ್ದಾರೆ. ಅಲ್ಲಿಗೆ ಯಾವುದೇ ವೈದ್ಯಾಧಿಕಾರಿಗಳನ್ನು ಇದುವರೆಗೂ ನೇಮಕ ಮಾಡಿಲ್ಲ. ಔಷಧಿಗಳ ಸರಬರಾಜು, ಗೋಣಿಕೊಪ್ಪ ಆಸ್ಪತ್ರೆಗೆ ಮತ್ತು ವಿರಾಜಪೇಟೆ ಆಸ್ಪತ್ರೆಗೆ ಸಮರ್ಪಕವಾಗಿ ಆಗುತ್ತಾಲ್ಲ. ಈ ನನ್ನ ಪ್ರಶ್ನೆಗೆ ಉತ್ತರ ಬರಲಿಲ್ಲ;

ಡಾ॥ ಹೆಚ್.ಸಿ. ಮಹದೇವಪ್ಪ : ಸನ್ಮಾನ್ಯ ಅಧ್ಯಕ್ಷರೆ, ನಮಗೆ ಇರತಕ್ಕಂತಹ ಕಾನೂನು ವ್ಯಾಪ್ತಿಯಲ್ಲಿ ಆಸ್ಪತ್ರೆಗಳಿಗೆ ಔಷಧಿಯನ್ನು ಸರಬರಾಜು ಮಾಡಿದ್ದೇವೆ. ಇನ್ನು ಉಳಿದ ನಾಲ್ಕು ಸಿವಿಲ್ ಸರ್ಜನ್ ಹುದ್ದೆ ಖಾಲಿ ಇದೆ. ಅದನ್ನು ಏಪ್ರಿಲ್ ಮೇ

ತಿಂಗಳಲ್ಲಿ ತುಂಬಲಿಕ್ಕೆ ಕ್ರಮ ತೆಗೆದುಕೊಳ್ಳುತ್ತೇವೆ. ಮತ್ತು ಈ ಕಟ್ಟಡದ ವಿಚಾರವಾಗಿ 3-4 ಸಾರಿ ಟೆಂಡರ್ ಕರೆದರೂ ಕೂಡ ಯಾರೂ ಅಲ್ಲಿ ಪಾರ್ಟಿಸಿಪೇಟ್ ಮಾಡಿಲ್ಲ ಅಧ್ಯಕ್ಷರೆ, ಅಲ್ಲಿ ಕಟ್ಟಡ ಕಟ್ಟಲಿಕ್ಕೆ ಯಾವ ಟೆಂಡರು ಬರುವುದಿಲ್ಲ. ಹೀಗಾಗಿ ಇಲಾಖಾ ವತಿಯಿಂದಲೇ ಕಟ್ಟಡ ನಿರ್ಮಾಣ ಪೂರ್ತಿ ಮಾಡಲಿಕ್ಕೆ ನಾವು ಪ್ರಯತ್ನ ಮಾಡುತ್ತೇವೆ.

ಶ್ರೀ ಹೆಚ್.ಡಿ. ಬಸವರಾಜು : ಕಾನೂರು ಬಗ್ಗೆ ನಾನು ಹೇಳಿರತಕ್ಕಂತಹದನ್ನು ಅವರು ತಪ್ಪಾಗಿ ತಿಳಿದುಕೊಂಡಿದ್ದಾರೆ. ಕಾನೂರು ಬೇರೆ ಪ್ರದೇಶ. ಅಲ್ಲದೆ ಯಾವಾಗ ನೇಮಕ ಮಾಡುತ್ತೀರಿ?

ಅಧ್ಯಕ್ಷರು : ಅದಕ್ಕೆ ಬೇರೆ ನೋಟೀಸ್ ಕೊಡಬೇಕಲ್ಲ. ವಿರಾಜಪೇಟೆ ವಿಚಾರ ಕೇಳಿ ಇಲ್ಲಿ ಬೇರೆ ಊರಿನ ಬಗ್ಗೆ ಕೇಳಿದರೆ ಆಗುವುದಿಲ್ಲ.

ಶ್ರೀ ಹೆಚ್.ಡಿ. ಬಸವರಾಜು : ಸಪ್ಲಿಮೆಂಟರಿಯಲ್ಲಿ ನಾನು ಕೇಳುತ್ತಿದ್ದೇನೆ.

ಅಧ್ಯಕ್ಷರು : ಸಪ್ಲಿಮೆಂಟ್‌ರಿ ಆದರೂ ಆ ಇನ್‌ಫರ್ಮೇಷನ್ ಏತಕ್ಕೆ ಇಟ್ಟುಕೊಂಡಿದ್ದಾರೆ?

ಶ್ರೀ ಹೆಚ್.ಡಿ. ಬಸವರಾಜು : ಯಾವಾಗ ನೇಮಕ ಮಾಡಬಹುದು ಎಂದು.

ಅಧ್ಯಕ್ಷರು : ಏಪ್ರಿಲ್ ಮೇ ಅಂತ ಹೇಳಿದ್ದಾರಲ್ಲ. ಈಗ ಮುಂದಿನ ಪ್ರಶ್ನೆ.

ಬೀದರ್ ಜಿಲ್ಲಾ ಆಸ್ಪತ್ರೆಗೆ ಮಂಜೂರಾದ ವೈದ್ಯಕೀಯ ಸಿಬ್ಬಂದಿ ವರ್ಗದ ವಿವರ ಕುರಿತು

1186 - ಶ್ರೀ ಸೈಯದ್ ಜುಲ್ಫಿಕರ್ ಹಷ್ಮಿ (ಬೀದರ್) : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೀದರ್‌ನಲ್ಲಿರುವ ಜಿಲ್ಲಾ ಆಸ್ಪತ್ರೆ (ಸಾರ್ವಜನಿಕ ಆಸ್ಪತ್ರೆ)ಗೆ ಮಂಜೂರಾಗಿರುವ ವೈದ್ಯಕೀಯ ಸಿಬ್ಬಂದಿ ವರ್ಗದ ಸಂಖ್ಯೆ ಎಷ್ಟು (ಎಲ್ಲಾ ವರ್ಗದ ಪರಿಣಿತರು ಹಾಗೂ ವೈದ್ಯರುಗಳ ಹಾಗೂ ಇತರೆ ಸಿಬ್ಬಂದಿ ವರ್ಗದ ವಿವರಗಳನ್ನು ಒದಗಿಸುವುದು)?

ಆ) ಇದರ ಪೈಕಿ ಎಷ್ಟು ಹುದ್ದೆಗಳು ಭರ್ತಿಯಾಗಿದೆ ಹಾಗೂ ಎಷ್ಟು ಹುದ್ದೆಗಳು ಖಾಲಿ ಇವೆ?

ಇ) ಎಷ್ಟು ಸಮಯದಿಂದ ಈ ಹುದ್ದೆಗಳು ಖಾಲಿ ಇವೆ? ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡಲು ಸರ್ಕಾರದವರು ಕೈಗೊಂಡಿರುವ ಕ್ರಮಗಳೇನು?

ಶ್ರೀ ಹೆಚ್.ಸಿ. ಮಹದೇವಪ್ಪ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):

ಅ) ಬೀದರ್ ಜಿಲ್ಲಾ ಆಸ್ಪತ್ರೆಗೆ ಒಟ್ಟು 213 ವಿವಿಧ ವರ್ಗದ ಹುದ್ದೆಗಳು ಮಂಜೂರಾಗಿರುವುದು (ವಿವರ ಲಗತ್ತಿಸಲಾಗಿದೆ)

ಆ) ಇದರ ಪೈಕಿ 206 ಹುದ್ದೆಗಳು ಭರ್ತಿಯಾಗಿವೆ ಹಾಗೂ 7 ಹುದ್ದೆಗಳು ಖಾಲಿ ಇರುವುದು.

ಇ) ಅ) ಕ್ಲಿನಿಕಲ್ ಸೈಕಾಲಜಿಸ್ಟ್ ಹುದ್ದೆಯು ದಿನಾಂಕ 27-7-84ರಿಂದ ಖಾಲಿ ಇರುವುದು. ಮೀಸಲಾತಿ ನಿಯಮ ಜಾರಿ ಇಲ್ಲದ ಪ್ರಯುಕ್ತ ಭರ್ತಿ ಮಾಡಲಾಗಲಿಲ್ಲ.